ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ಪ್ರಾಂತ್ಯದವರೆಲ್ಲರೂ ಸೇರಿ 123 ಸಿಬ್ಬಂದಿ ಇದ್ದಾರೆಂದು ಉತ್ತರದಲ್ಲಿದೆ. ಬಹುಶಃ ವಿಶಾಲ ಮನಸ್ಸಿಗರಾದ ಕನ್ನಡಿಗರು ಎಲ್ಲಾ ಪ್ರಾಂತ್ಯದ ಜನರನ್ನು, ಅಂದರೆ 32 ಜನ, 11 ಜನ, ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಇಲ್ಲಿ ಆಯ್ಕೆಮಾಡಿದ್ದಾರೆ. ಇದು ನಮ್ಮ ಔದಾರ್ಯವನ್ನು ತೋರಿಸುತ್ತದೆ. ಕನ್ನಡಿಗರಿಗೆ ಉಳಿದಿರತಕ್ಕಂಥ ಬೇರೆ ಬೇರೆ ಭವನಗಳಲ್ಲಿ ಇಂಥ ಅವಕಾಶವನ್ನು ಕೊಡಲಾಗಿದೆಯೇ? ಇದಕ್ಕೆ ತಾವು ಉತ್ತರವನ್ನು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ : ಸ್ವಲ್ಪ ಮಟ್ಟಿಗೆ ಆಗಿದೆ, ಇಲ್ಲವೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಕರ್ನಾಟಕದಲ್ಲಿ ಇರತಕ್ಕಂಥವರು ಕೆಲವು ಸಂದರ್ಭದಲ್ಲಿ ದೆಹಲಿಗೆ ಹೋಗಿ ಉಳಿದುಕೊಂಡಾಗ, ಅವರಿಗೆ ಮನೆಗಳ ವ್ಯವಸ್ಥೆ ಮಾಡಿ ಕೊಡಬೇಕಾಗುತ್ತದೆ. ಇದರ ಜೊತೆಗೆ ಅಲ್ಲಿರತಕ್ಕಂಥ ಸಿಬ್ಬಂದಿಗಳಿಗೆ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಹೆಚ್ಚು ಆಲೋಯೆನ್ಸ್‌ನ್ನು ಕೊಡುತ್ತೇವೆ. ಆದರೆ ಇತ್ತೀಚಿನ ದಿವಸಗಳಲ್ಲಿ, ಅಲ್ಲಿ ಸಂಪೂರ್ಣವಾಗಿ ಕನ್ನಡಿಗರನ್ನು ತುಂಬಬೇಕೆಂಬ ತೀರ್ಮಾನಕ್ಕಾಗಿ, ತಾತ್ವಿಕವಾಗಿ ನಾವು ಒಪ್ಪಿಕೊಂಡಿದ್ದೇವೆ ಮತ್ತು ಆ ಕೆಲಸವನ್ನು ಈಗಾಗಲೇ ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ. ಬಸವರಾಜು : ಈ ಕರ್ನಾಟಕ ಭವನದಲ್ಲಿ 3 ಜನ ಐ.ಎ.ಎಸ್. ಮತ್ತು ಒಬ್ಬರು ಕೆ.ಎ.ಎಸ್. ಅಧಿಕಾರಿಗಳು ಇದ್ದಾರೆ. ಆದರೆ ಇವರ ಅವಶ್ಯಕತೆ ಅಲ್ಲಿ ಇದೆಯೇ? ಸರ್ಕಾರ ಇದರ ಬಗ್ಗೆ ತಿಳುವಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಸಧ್ಯಕ್ಕಂತೂ ಅವಶ್ಯಕತೆ ಇದೆ. ಮುಂದೆ ಯಾರಾದರೂ ಅವಶ್ಯಕತೆ ಬೇಡ ಎಂದು ಹೇಳಿದರೆ, ಹಿಂತೆಗೆದುಕೊಳ್ಳೋಣ.

ಕೇಂದ್ರ ಸರ್ಕಾರದ ವಕ್ಫ್ ಕಾಯಿದೆ.

292 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಕೇಂದ್ರದ ಹೊಸ ವಕ್ಫ್ ಕಾಯಿದೆ ಒಪ್ಪಿಕೊಂಡಿದೆಯೇ?

ಆ) ಹಾಗಿದ್ದಲ್ಲಿ, ಈ ಕಾಯಿದೆ ರಾಜ್ಯದಲ್ಲಿ ಯಾವಾಗಲಿಂದ ಜಾರಿಯಲ್ಲಿ ಬರಲಿದೆ?

ಇ) ಈ ಕಾಯ್ದೆಯಡಿಯಲ್ಲಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ದಿನಾಂಕ 1-1-1996 ರಿಂದ ವಕ್ಫ್ ಕಾಯ್ದೆ, 1995 ದೇಶಾದ್ಯಂತ ಜಾರಿಗೆ ಬಂದಿರುತ್ತದೆ. ವಕ್ಫ್ ಕಾಯ್ದೆ, 1995ನ್ನು ಜಾರಿಗೆ ತರುವ ಸಲುವಾಗಿ ರಾಜ್ಯ ಸರ್ಕಾರವು ಕರ್ನಾಟಕ ವಕ್ಫ್ ನಿಯಮಗಳು, 1997 ನ್ನುರಚಿಸಿದೆ ಮತ್ತು ಇದನ್ನು ದಿನಾಂಕ 9-4-1997ರ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟಪಡಿಸಿದೆ.

೫) ವಕ್ಫ್ ಕಾಯ್ದೆ, 1995 ಜಾರಿಗೆ ಬಂದ ನಂತರ ಕರ್ನಾಟಕ ಸರ್ಕಾರವು ಕರ್ನಾಟಕ ವಕ್ಫ್ ನಿಯಮಗಳು, 1997 ಅನ್ನು ರಚಿಸಿ, ಗೆಜೆಟ್‌ನಲ್ಲಿ ಪ್ರಕಟಪಡಿಸಿದೆ. ವಕ್ಫ್ ಆಸ್ತಿಗಳನ್ನು ಎರಡನೇ ಬಾರಿಗೆ ಸರ್ವೆ ಮಾಡುವ ಸಲುವಾಗಿ ಸರ್ವೆ ಕಮೀಷನರ್, ಅಸಿಸ್ಟೆಂಟ್ ಸರ್ವೆ ಕಮೀಷನರ್‌ಗಳನ್ನು ನೇಮಿಸುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ವಕ್ಫ್ ಮಂಡಳಿಯ ಸದಸ್ಯತ್ವಕ್ಕಾಗಿ ಚುನಾವಣೆ ನಡೆಸುವ ಸಲುವಾಗಿ ಬೆಂಗಳೂರು ವಿಭಾಗದ ವಿಭಾಗಾಧಿಕಾರಿಯವರನ್ನು ಎಲೆಕ್ಟೊರಲ್ ರಿಜಿಸ್ಟ್ರೇಷನ್ ಆಫೀಸರ್ ಮತ್ತು ರಿಟರ್ನಿಂಗ್ ಆಫೀಸರ್ ಎಂದು ನೇಮಿಸಲಾಗಿದೆ ಮತ್ತು ರಾಜ್ಯದ ಪ್ರತಿ ಕಂದಾಯ ವಿಭಾಗದಲ್ಲಿ ಒಂದು ವಕ್ಫ್ ಟ್ರಿಬ್ಯೂನಲ್ ತೆರೆಯಲು ಕ್ರಮ ವಹಿಸಲಾಗುತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ರಚಿಸಿರುವ ಈ ವಕ್ಫ್ ಕಾಯಿದೆಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆಯೇ ಎಂಬುದು ನನ್ನ ಪ್ರಶ್ನೆ ಇದೆ. ಅದಕ್ಕೆ ಮಾನ್ಯ ಮಂತ್ರಿಗಳ ಉತ್ತರದಲ್ಲಿ, ಈ ಕಾಯಿದೆ ದೇಶಾದ್ಯಂತ ಜಾರಿಗೆ ಬಂದಿರುತ್ತದೆ ಮತ್ತು ದಿನಾಂಕ 9-4-1997ರ ಗೆಜೆಟ್‌ನಲ್ಲಿ ಪ್ರಕಟಣೆ ಹೊರಡಿಸಿದ್ದೇವೆಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ, ಈ ಕಾಯಿದೆಯನ್ನು ಸದನದ ಮುಂದೆ ತರತಕ್ಕಂಥ ಅಗತ್ಯ ಇದೆಯೋ, ಅಥವಾ ಇಲ್ಲವೋ ಎಂಬುದರ ಬಗ್ಗೆ ದಯಮಾಡಿ ಉತ್ತರವನ್ನು ಕೊಡಬೇಕು. ಎರಡನೆಯದಾಗಿ, ಈ ಕಾಯಿದೆ ಜಾರಿಯಲ್ಲಿರುವಾಗ, ಕಾಯಿದೆ ಪ್ರಕಾರ, ಕಂದಾಯದ 4 ವಿಭಾಗಗಳಲ್ಲಿ ಈ ವಕ್ಫ್ ನ್ಯಾಯಮಂಡಳಿಗಳನ್ನು ಪ್ರಾರಂಭ ಮಾಡಬೇಕು, ಈ ವಿಚಾರವನ್ನು ವಕ್ಫ್ ನ್ಯಾಯಮಂಡಳಿಗಳನ್ನು ಪ್ರಾರಂಭ ಮಾಡಬೇಕು, ಈ ವಿಚಾರವನ್ನು ವಕ್ಫ್‌ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದರೆ ಇದುವರೆವಿಗೂ ಇದರ ಬಗ್ಗೆ ತೀರ್ಮಾನ ಆಗಿಲ್ಲ. ವಕ್ಫ್ ನ್ಯಾಯ ಮಂಡಳಿಯನ್ನು ರಚನೆ ಮಾಡುವುದರ ಬಗ್ಗೆ ಸರ್ಕಾರ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ?

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಈ ಹೊಸ ವಕ್ಫ್ ಕಾಯಿದೆ, 1995ನ್ನು ಜಾರಿಗೆ ತರುವ ಸಲುವಾಗಿ, ಕರ್ನಾಟಕ ರಾಜ್ಯದಲ್ಲಿ ಹೊಸ ರೂಲ್ಸ್ ಫ್ರೇಮ್ ಮಾಡಿ ಗೆಜೆಟ್‌ನೋಟಿಫಿಕೇಷನ್ ಮಾಡಿದ್ದೇವೆ. ನೆರೆ ರಾಜ್ಯಗಳಾದ, ಆಂಧ್ರಪ್ರದೇಶದಲ್ಲಿ ಈ ಹೊಸ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ. ನಾವು ಲೀಗಲ್ ಒಪೀನಿಯನ್ ತರುವಾಗ ಇದನ್ನು ಅಸೆಂಬ್ಲಿಯಲ್ಲಿ ತರುವುದು ಬೇಡ, ಹಾಗೆಯೇ ಗೆಜೆಟ್ ನೋಟಿಫಿಕೇಷನ್ ಮಾಡಬಹುದೆಂದು ಒಪೀನಿಯನ್ ಬಂದಿದೆ. ಅದರ ಜೊತೆಗೆ ನಾಲ್ಕು ಲ್ಯಾಂಡ್ ಟ್ರಿಬ್ಯೂನಲ್ ಬಗ್ಗೆ ಮಾನ್ಯ ಸದಸ್ಯರು ಹೇಳಿದಂತೆ, ಈ ನಾಲ್ಕು ವಿಭಾಗದಲ್ಲಿ ಕರ್ನಾಟಕ ವಕ್ಫ್ ಲ್ಯಾಂಡ್ ಟ್ರಿಬ್ಯೂನಲ್ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಸಗೀರ್ ಅಹಮದ್‌ರವರಿಗೆ ಕೇಳುವುದೇನೆಂದರೆ, ವಕ್ಫ್ ಬೋರ್ಡ್‌ನ ಕೆಲವು ಸದಸ್ಯರು ಹೈಕೋರ್ಟ್‌ಗೆ ಹೋಗಿ

ತಡೆಯಾಜ್ಞೆಯನ್ನು ತಂದಿದ್ದಾರೆ. ಈ ತಡೆಯಾಜ್ಞೆಯನ್ನು ತರದಿದ್ದರೆ, ಇಷ್ಟು ಹೊತ್ತಿಗೆ ಚುನಾವಣೆಗಳನ್ನು ಮುಗಿಸಿ, ಹೊಸ ಕಾಯಿದೆಯನ್ನು ಜಾರಿಗೆ ತರಬಹುದಾಗಿತ್ತು. ಆದರೆ ಈ ಮ್ಯಾಟರ್ ಸುಮಾರು ಒಂದು ವರ್ಷದಿಂದ ಹೈಕೋರ್ಟ್ ಮುಂದೆ ಇದೆ. ಮೊನ್ನೆದಿವಸ ಹೈಕೋರ್ಟ್ ಚುನಾವಣೆಗಳನ್ನು ಸರ್ಕಾರ ಮಾಡಬಹುದೆಂದು ಆದೇಶ ಕೊಟ್ಟಿದೆ. ಈ ಚುನಾವಣೆಗೆ ಡಿವಿಜನಲ್ ಕಮೀಷನರ್‌ರವರು. ರಿಟರ್ನಿಂಗ್ ಆಫೀಸರಾಗಿರುತ್ತಾರೆ. ಈಗಾಗಲೇ ಎಲ್ಲಾ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ, ಆದಷ್ಟು ಬೇಗ ಮಾಡುತ್ತೇವೆ ಮತ್ತು ಇದಕ್ಕೆ ಇವರೂ ಸಹ ತಮ್ಮ ಸಹಕಾರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸಂವಿಧಾನ ಬದ್ಧವಾಗಿ, ಒಂದು ಕಾಯಿದೆಯನ್ನು ತಿದ್ದುಪಡಿ ಮಾಡಿ, ಯಾವುದೇ ರಾಜ್ಯಕ್ಕೆ ಕಳುಹಿಸಿರುವಂತಹ ಸಂದರ್ಭದಲ್ಲಿ ಆದರೆ ಮಾನ್ಯ ಸಚಿವರು ಹೇಳಿದಂತೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಜಾರಿಗೆ ತಂದಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಈ ಕಾಯಿದೆಯನ್ನು ಸದನಕ್ಕೆ ತಂದು, ಅದರ ಮೇಲೆ ಚರ್ಚೆ ನಡೆದ ನಂತರ ತೀರ್ಮಾನ ಆಗಿರುವ ವಿಚಾರ ನನಗೆ ಗೊತ್ತಿದೆ. ಗೆಜೆಟ್ ನೋಟಿಫಿಕೇಷನ್ ಸಾಕು, ಆ ಕಾಯಿದೆಯನ್ನು ಸದನಕ್ಕೆ ತರುವಂತಹ ಅವಶ್ಯಕತೆ ಇಲ್ಲ ಎಂದು ಹೇಳಿದರೆ, ಇದಕ್ಕೆ ನಾನು ಏನು ಹೇಳಲಿ? ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿರುವುದರಿಂದ ತಾವು ನನ್ನ ರಕ್ಷಣೆಗೆ ಬರಬೇಕಾಗುತ್ತದೆ. ಆದರೆ ತಾವು ಸುಮ್ಮನೆ ಕುಳಿತು ಕೊಂಡಿದ್ದೀರಿ?

ಶ್ರೀ ಎಂ.ಸಿ. ನಾಣಯ್ಯ : ಏಕಾಏಕಿಯಾಗಿ ಈ ಪ್ರಶ್ನೆಯನ್ನು ಕೇಳಿದ್ದೀರಿ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟ ಹಾಗೆ ಲಿಖಿತ ಮೂಲಕ ನೋಟೀಸನ್ನು ಕೊಟ್ಟು ಕೇಳಿ, ಕಾನೂನು ಇಲಾಖೆ ಏನು ಒಪೀನಿಯನ್ ಕೊಟ್ಟಿದ್ದಾರೆ, ಅದನ್ನು ಹೇಳುತ್ತೇನೆ. ಆದರೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದಕ್ಕೆ ಹೈಕೋರ್ಟ್‌ನಿಂದ ತಡೆಯಾಜ್ಞೆಯನ್ನು ತಂದಿದ್ದರು. ಆದರೆ ಈಗ ಹೈಕೋರ್ಟ್ ಚುನಾವಣೆಯನ್ನು ಮಾಡಬಹುದೆಂದು ಆದೇಶ ಕೊಟ್ಟಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇವತ್ತು ಮಧ್ಯಾಹ್ನ 2-30 ಗಂಟೆಗೆ, ಸರ್ಕಾರ ಎಲ್ಲಾ ಸಮಿತಿಗಳನ್ನು ತೆಗೆದು ಹಾಕಿದ್ದರಲ್ಲಾ, ಅದು ಮತ್ತೆ ಕೋರ್ಟ್‌ಗೆ ಬಂದು ಸ್ಟೇ ಹಾಗಿದೆ, ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಗೀರ್ ಅಹಮದರವರೇ, ವಕ್ಫ್ ಮಂತ್ರಿಯವರು ಹೇಳಿದರು, ಡೈರೆಕ್ಷನ್ ಇದೆ, ಗೆಜೆಟ್ ನೋಟಿಫಿಕೇಷನ್ ಆದರೆ ಸಾಕು, it need not be brought before the Assembly. Whatever information that has been mentioned on the file by the Law Minister, ನನಗೆ ನೆನಪು ಇಲ್ಲ, ಎಂದು ಹೇಳುತ್ತಿದ್ದಾರೆ, ಆದರೆ ನೀವು ಒಂದು ನೋಟೀಸ್ ಕೊಟ್ಟರೆ, If you so desire, I will withhold this question, ಮಾನ್ಯ ವಕ್ಫ್‌ಮಂತ್ರಿಯವರ ಪ್ರಶ್ನೆ ಮುಂದೆ ಬಂದಾಗ ಈ ಪ್ರಶ್ನೆಯನ್ನು ಅದರ ಜೊತೆ ತೆಗೆದುಕೊಳ್ಳೋಣ. This question is held over...